ದಾರಿದೀಪಗಳನ್ನು ಅಳವಡಿಸುವುದು ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮುಂತಾದ ಸೌಲಭ್ಯಗಳನ್ನು ಒದಗಿಸಿ ಮಾದರಿ ಕಾಲೋನಿಗಳಾಗಿ ಅಭಿವೃದ್ಧಿಪಡಿಸಲು ಹಾಗೂ ನಿವೇಶನ ರಹಿತರಿಗೆ ನಿವೇಶನ ಹಂಚುವ ಕಾರ್ಯಕ್ರಮವನ್ನು ರೂಪಿಸಿದೆ. ಇದರಿಂದ ಒಂದೇ ಪ್ರದೇಶದಲ್ಲಿ ಕನಿಷ್ಠ 20 ಕುಟುಂಬಗಳು ವಾಸಿಸುವ ಸ್ಥಳಗಳಲ್ಲಿ ಈ ಸೌಲಭ್ಯಗಳನ್ನು ಒದಗಿಸುವುದರಿಂದ ಆಧುನಿಕ ಕಾಲೋನಿಗಳಾಗಿ ಪರಿವರ್ತಿಸಬಹುದು.

**8. ಎಕ್ಸ್‌ಪ್ರೆಸ್ ಫೀಡರ್**

ವಿದ್ಯುತ್‌ಮಗ್ಗ ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿ / ನೇಕಾರರ ಕಾಲೋನಿಯಲ್ಲಿ ವಿದ್ಯುತ್ ಮಗ್ಗ ನೇಕಾರರಿಗೆ ಉತ್ಪಾದನಾ ಚಟುವಟಿಕೆಗೆ ನಿರಂತರ ವಿದ್ಯುತ್ ಒದಗಿಸಲು ವಿದ್ಯುತ್ ಮಗ್ಗ ನೇಕಾರರ ಸಹಕಾರ ಸಂಘ, ವಿವಿದ್ಧೋದ್ದೇಶಗಳ ಸಹಕಾರ ಸಂಘ, ಸ್ವಯಂ ಸೇವಾ ಸಹಕಾರ ಸಂಘ, ಮಹಿಳಾ ಸೇವಾ ಸಹಕಾರ ಸಂಘ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಮೂಲಕ ಸ್ಥಳೀಯ ವಿದ್ಯುತ್ ಸರಬರಾಜು ಕಂಪನಿಯಿಂದ ಎಕ್ಸ್‌ಪ್ರೆಸ್ ಫೀಡರ್ ಅಳವಡಿಸಲು ಅವಶ್ಯವಿರುವ ಅನುದಾನವನ್ನು ಒದಗಿಸಲಾಗುವುದು.

**9. ಸಹಕಾರಿ ನೂಲಿನ ಗಿರಣಿಗಳನ್ನು ಪ್ರೋತ್ಸಾಹಿಸಲು ಪ್ರತಿ ಯೂನಿಟ್ ವಿದ್ಯುತ್‌ಗೆ ರೂ.2–/ ಸಹಾಯಧನ**

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಗಿರಣಿಗಳ ವರಮಾನ ಮಟ್ಟವನ್ನು ಹೆಚ್ಚಿಸಲು ಸರ್ಕಾರವು ಸಹಕಾರಿ ನೂಲಿನ ಗಿರಣಿಗಳಿಗೆ ಪ್ರತಿ ಯೂನಿಟ್‌ಗೆ ರೂ.2/– ರಂತೆ ವಿದ್ಯುತ್ ಸಹಾಯಧನ ಒದಗಿಸುತ್ತಿದೆ.

**10. ಸಹಕಾರಿ ನೂಲಿನ ಗಿರಣಿಗಳು ಭಾರತೀಯ ಹತ್ತಿ ನಿಗಮ (Cotton Corporation of India) ದಿಂದ ಖರೀದಿಸಿದ ಹತ್ತಿಯ ಮೌಲ್ಯದ ಮೇಲೆ ಶೇ.5% ರಷ್ಟು ಸಹಾಯಧನ**

ರಾಜ್ಯದಲ್ಲಿರುವ ಸಹಕಾರಿ ನೂಲಿನ ಗಿರಣಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಲು ಮತ್ತು ಗಿರಣಿಗಳ ವರಮಾನ ಮಟ್ಟವನ್ನು ಹೆಚ್ಚಿಸಲು ಸರ್ಕಾರವು ಸಹಕಾರಿ ನೂಲಿನ ಗಿರಣಿಗಳು ಭಾರತೀಯ ಹತ್ತಿ ನಿಗಮ (Cotton Corporation of India) ದಿಂದ ಖರೀದಿಸಿದ ಹತ್ತಿಯ ಮೌಲ್ಯದ ಮೇಲೆ ಶೇ.5ರಷ್ಟು ಸಹಾಯಧನವನ್ನು ಒದಗಿಸುತ್ತಿದೆ.

## ವಿಶೇಷ ಯೋಜನೆಗಳು

- **ಸ್ಯಾನಿಟರಿ ನ್ಯಾಪ್ಕಿನ್ ತಯಾರಿಕಾ ಘಟಕ**

ಗ್ರಾಮೀಣ ಹಾಗೂ ಪಟ್ಟಣದ ಮಹಿಳೆಯರಿಗೆ ಕಡಿಮೆ ವೆಚ್ಚದಲಿ ಉತ್ತಮ ಗುಣಮಟ್ಟದ ಸ್ಯಾನಿಟರಿ ನ್ಯಾಪ್ಕಿನ್ ಒದಗಿಸುವ ಹಾಗೂ ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಮಹಿಳಾ ಸ್ನೇಹಿ ವಿನೂತನ ಮಾದರಿಯ "ಸ್ಯಾನಿಟರಿ ನ್ಯಾಪ್ಕಿನ್ ತಯಾರಿಕಾ ಘಟಕ"ವನ್ನು ಸ್ಥಾಪಿಸಲು ಪ್ರೋತ್ಸಾಹಿಸಲಾಗುವುದು.

ಈ ಘಟಕವನ್ನು ಪ್ರಾರಂಭಿಸಲು ಇಚ್ಛಿಸುವ ಆರಂಭಿಕ ನವ ಉದ್ಯಮಿಗಳನ್ನು (Start up Entrepreneurs) ಪ್ರೋತ್ಸಾಹಿಸುವ ಉದ್ದೇಶವನ್ನು ಇಲಾಖೆಯು ಹೊಂದಿರುತ್ತದೆ. ಮಹಿಳೆಯರಿಗೆ ಉತ್ತೇಜನ ನೀಡುವುದರಿಂದ ಸ್ವಾವಲಂಭಿಗಳಾಗಿ ಹೊರಹೊಮ್ಮಲು ಹಾಗೂ ಅವರ ಆದಾಯವನ್ನು ಹೆಚ್ಚಿಸಲು ಸಾಧ್ಯವಾಗುತ್ತದೆ. ಮಹಿಳಾ ಸಬಲೀಕರಣ ಮುಖ್ಯ ಉದ್ದೇಶವಾಗಿರುತ್ತದೆ. ಘಟಕ ವೆಚ್ಚ ಕನಿಷ್ಠ ರೂ.25.00 ಲಕ್ಷ ಆಗಿದ್ದು, ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನೆಗಳಡಿ ಸಹಾಯಧನವ ಪಡೆಯಬಹುದಾಗಿರುತ್ತದೆ.

- **ಹುಬ್ಬಳ್ಳಿಯಲ್ಲಿ ಲೆದರ್ ಟೆಕ್ಸ್‌ಟೈಲ್ ಉದ್ಯಮ**

ಲೆದರ್ ಉತ್ಪನ್ನಗಳಿಗೆ ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಭಾರಿ ಬೇಡಿಕೆ ಇರುವುದರಿಂದ ಹುಬ್ಬಳ್ಳಿಯಲ್ಲಿ ಲೆದರ್ ಟೆಕ್ಸ್‌ಟೈಲ್ ಉದ್ಯಮಗಳನ್ನು ಸ್ಥಾಪಿಸುವ ಉದ್ದೇಶವನ್ನು ಹೊಂದಲಾಗಿದೆ. ಈ ಘಟಕವನ್ನು ಪ್ರಾರಂಭಿಸಲು ಇಚ್ಛಿಸುವ ಆರಂಭಿಕ ನವ ಉದ್ಯಮಿಗಳನ್ನು (Start up Entrepreneurs) ಪ್ರೋತ್ಸಾಹಿಸುವ ಉದ್ದೇಶವನ್ನು ಇಲಾಖೆಯು ಹೊಂದಿರುತ್ತದೆ.

ಈ ಉದ್ಯಮವನ್ನು ಸ್ಥಾಪಿಸಲು ಆಸಕ್ತರಿಗೆ ಉತ್ತೇಜನ ನೀಡುವುದರಿಂದ ಸದರಿ ಫಲಾನುಭವಿಗಳು ಸ್ವಾವಲಂಭಿಗಳಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ. ಇದರಿಂದ ಪ್ರತಿಯೊಂದು ಘಟಕದಲ್ಲಿ ಮಾಲೀಕರು ಸೇರಿದಂತೆ ಹಲವಾರು ಜನರಿಗೆ ಉದ್ಯೋಗವನ್ನು ಒದಗಿಸಿ ಅವರ ಆದಾಯವನ್ನು ಹೆಚ್ಚಿಸಬಹುದಾಗಿರುತ್ತದೆ. ಘಟಕ ವೆಚ್ಚ ಕನಿಷ್ಠ ರೂ.25.00 ಲಕ್ಷ ಆಗಿದ್ದು, ಇಲಾಖೆಯ ಜಾರಿಯಲ್ಲಿರುವ ಯೋಜನೆಗಳಡಿ ಸಹಾಯಧನ ಪಡೆಯಬಹುದಾಗಿರುತ್ತದೆ.

- **ಚಾಮರಾಜನಗರ ಜಿಲ್ಲೆಯನ್ನು ರಾಜ್ಯದ "Knitwear Hub" ಎಂದು ಅಭಿವೃದ್ಧಿ ಪಡಿಸುವುದು. (ನಿಟ್‌ವೇರ್ ಮತ್ತು ಹೊಸೈರಿ)**

ರಾಜ್ಯದಲ್ಲಿನ ಜವಳಿ ಘಟಕಗಳಲ್ಲಿ ಸಿದ್ದ ಉಡುಪುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ತಯಾರಿಸುತ್ತಿದ್ದು, Knits ಬಟ್ಟೆಗಳು ಬೇಡಿಕೆಗನುಗುಣವಾಗಿ ತಯಾರಿಕೆ ಆಗುತ್ತಿಲ್ಲ. ಈ ಉತ್ಪನ್ನಗಳನ್ನು ತಯಾರಿಸುವ ಘಟಕಗಳ ತೀವ್ರ ಕೊರತೆ ರಾಜ್ಯದಲ್ಲಿದೆ. ಚಾಮರಾಜನಗರ ಜಿಲ್ಲೆಯು ತಮಿಳುನಾಡು ರಾಜ್ಯದ ಕೊಯಂಬತ್ತೂರು ಮತ್ತು ತಿರುಪುರ್ ಜಿಲ್ಲೆಗಳ ಗಡಿ ಭಾಗದಲ್ಲಿರುವದರಿಂದ ಆ ಜಿಲ್ಲೆಗಳಲ್ಲಿ ತಯಾರಾಗುವ Knits ಬಟ್ಟೆಗಳನ್ನು ತಯಾರಿಸುವ ಕಚ್ಚಾಮಾಲು ಹಾಗೂ ಜಾಬ್ ವರ್ಕ್ ದೊರೆಯುವುದರಿಂದ ಚಾಮರಾಜನಗರ ಜಿಲ್ಲೆಯಲ್ಲಿ ಪ್ರಶಸ್ತವಾದ ವಾತಾವರಣ ಇದೆ.

ಈ Knits ಬಟ್ಟೆಗಳನ್ನು ತಯಾರಿಸುವ ಜವಳಿ ಘಟಕವನ್ನು ಪ್ರಾರಂಭಿಸಲು ಇಚ್ಛಿಸುವ ಆರಂಭಿಕ ಉದ್ಯಮಿಗಳನ್ನು (Start up Entreprenuers) ಪ್ರೋತ್ಸಾಹಿಸುವ ಉದ್ದೇಶವನ್ನು ಇಲಾಖೆಯು ಹೊಂದಿರುತ್ತದೆ. ಈ ಘಟಕಗಳ ಸ್ಥಾಪನೆಯಿಂದ ಚಾಮರಾಜನಗರ ಜಿಲ್ಲೆಯನ್ನು ರಾಜ್ಯದ "Knitwear Hub" ಎಂದು ಅಭಿವೃದ್ಧಿ ಪಡಿಸಬಹುದಾಗಿರುತ್ತದೆ.

- **ಬೆಳಗಾವಿ ಜಿಲ್ಲೆಯ ಬೋರಗಾಂವನ್ನು ಮಾದರಿ ಜವಳಿ ಪಾರ್ಕ್ ಆಗಿ ಅಭಿವೃದ್ಧಿಪಡಿಸುವುದು**


ಬೆಳಗಾವಿ ಜಿಲ್ಲೆಯು ಮಹಾರಾಷ್ಟ್ರದ ಗಡಿ ಭಾಗದಲ್ಲಿದ್ದು, ಈ ಪಾರ್ಕ್‌ನ್ನು ಇಚಲಕರಂಜಿಯ ಮಾದರಿಯಲ್ಲಿ ಅತ್ಯಾಧುನಿಕ ಯಂತ್ರೋಪಕರಣಗಳನ್ನೊಳ ಗೊಂಡ ವಿದ್ಯುತ್ ಮಗ್ಗಗಳನ್ನು ಸ್ಥಾಪಿಸಲು ಉತ್ತೇಜನ ನೀಡುವ ಉದ್ದೇಶ ಹೊಂದಲಾಗಿರುತ್ತದೆ. ಈ ನಿಟ್ಟಿನಲ್ಲಿ ಹೊಸ ಮಾದರಿಯ ಜವಳಿ ಘಟಕಗಳನ್ನು ಈ ಜವಳಿ ಪಾರ್ಕ್‌ನಲ್ಲಿ ಸ್ಥಾಪಿಸಲು ಇಚ್ಛಿಸುವ ನವ ಉದ್ಯಮದಾರರಿಗೆ ಪ್ರೋತ್ಸಾಹ ನೀಡಲು ಉದ್ದೇಶಿಸಿದೆ.

**ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು**
**ಕೈಮಗ್ಗ ಮತ್ತು ಜವಳಿ ಇಲಾಖೆ**
ನಂ. 86, 1 ಮತ್ತು 2ನೇ ಮಹಡಿ, "ಶುಭೋದಯ ಸಂಕೀರ್ಣ",
ರೈಲ್ವೆ ಸಮಾನಾಂತರ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560020.
ದೂರವಾಣಿ ಸಂಖ್ಯೆ: 08023561628, 23568228, 23568223,
23564829 ಫ್ಯಾಕ್ಸ್: 080–23566082
ಇ–ಮೇಲ್: texcomgok@gmail.com
ವೆಬ್: www.karnatakadht.org
07-08-2019

ಕರ್ನಾಟಕ ಸರ್ಕಾರ

# ಕೈಮಗ್ಗ ಮತ್ತು ಜವಳಿ ಇಲಾಖೆ

## ಪ್ರಮುಖ ಯೋಜನೆಗಳು



# ಜವಳಿ

ನೇಕಾರರ ವಿಶೇಷ ಪ್ಯಾಕೇಜ್ ಯೋಜನೆಯಡಿ ನೇಕಾರ ಫಲಾನುಭವಿಗಳು ಸ್ವಯಂ ಉದ್ಯೋಗ ಕೈಗೊಂಡು ಸಮಾಜದ ಮುಖ್ಯ ವಾಹಿನಿಗೆ ಬರಲು ಅನುಕೂಲವಾಗುವಂತೆ ಫಲಾನುಭವಿ / ಸಮುದಾಯ ಆಧಾರಿತ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು
ಕೈಮಗ್ಗ ಮತ್ತು ಜವಳಿ ಇಲಾಖೆ

## ಫಲಾನುಭವಿ ಆಧಾರಿತ ಯೋಜನೆಗಳ ವಿವರ

### 1. 02 ವಿದ್ಯುತ್ ಮಗ್ಗ ಖರೀದಿಗೆ ಸಹಾಯಧನ

- ಘಟಕ ವೆಚ್ಚ ರೂ.3.00 ಲಕ್ಷ
- **ಸರ್ಕಾರದ ಸಹಾಯಧನ :**
  - **ಸಾಮಾನ್ಯ ವರ್ಗ –** ಶೇ. 50 ಗರಿಷ್ಠ ರೂ. 1.50 ಲಕ್ಷ / ಬ್ಯಾಂಕ್ ಸಾಲ – ಶೇ.50
  - **ಪ.ಜಾ/ಪ.ಪಂ –** ಶೇ. 90 ಗರಿಷ್ಠ ರೂ. 2.70 ಲಕ್ಷ / ಬ್ಯಾಂಕ್ ಸಾಲ / ಫಲಾನುಭವಿವಂತಿಕೆ – ಶೇ. 10

### 2. ಎಲೆಕ್ಟ್ರಾನಿಕ್ ಜಕಾರ್ಡ್

ಹಾಲಿ ಕಾರ್ಯನಿರತ ವಿದ್ಯುತ್ ಮಗ್ಗಗಳಲ್ಲಿ ವಿನ್ಯಾಸವನ್ನು ಪ್ರತಿ ಬಾರಿ ಬದಲಾಯಿಸಲು ಪ್ರತಿಯೊಂದು ಬಾರಿಯ ಯಾಂತ್ರಿಕ ಸೆಟ್ಟಿಂಗ್ ಬದಲಾಯಿಸಬೇಕಾಗುತ್ತದೆ. ಆದ್ದರಿಂದ ಈ ತೊಂದರೆಯನ್ನು ತಪ್ಪಿಸಲು ಹಾಗೂ ಕನಿಷ್ಠ ವೆಚ್ಚದಲ್ಲಿ ಹೆಚ್ಚಿನ ವಿನ್ಯಾಸಗಳನ್ನು ಪಡೆಯಲು ಎಲೆಕ್ಟ್ರಾನಿಕ್ ಜಕಾರ್ಡ್‌ನ್ನು ಪರಿಚಯಿಸಲಾಗಿದೆ. ಇದು ಸೀರೆಗಳಲ್ಲಿ ವಿವಿಧ ಡಿಸೈನ್‌ಗಳನ್ನು ಅಳವಡಿಸಲು ಅನುಕೂಲವಾಗಿದೆ.

- ಘಟಕ ವೆಚ್ಚ ರೂ. 4.50 ಲಕ್ಷ
- **ಸರ್ಕಾರದ ಸಹಾಯಧನ :**
  - **ಸಾಮಾನ್ಯ ವರ್ಗ –** ಶೇ. 50 ಗರಿಷ್ಠ ರೂ. 2.25 ಲಕ್ಷ / ಬ್ಯಾಂಕ್ ಸಾಲ– ಶೇ. 50
  - **ಪ.ಜಾ/ಪ.ಪಂ –** ಶೇ. 90 ಗರಿಷ್ಠ ರೂ. 4.05 ಲಕ್ಷ / ಬ್ಯಾಂಕ್ ಸಾಲ – ಶೇ. 10

### 3. ಕೈಮಗ್ಗ ಮತ್ತು ಸಲಕರಣೆಗಳ ಖರೀದಿಗೆ ಸಹಾಯಧನ

- ಘಟಕ ವೆಚ್ಚ ರೂ.30,000/– ಗಳು
- ಸರ್ಕಾರದ ಸಹಾಯಧನ – ಪ.ಜಾ/ ಪ.ಪಂ – ಶೇ.90 ಗರಿಷ್ಠ ರೂ.27.000/– ಮತ್ತು ಫಲಾನುಭವಿ ವಂತಿಕೆ – ರೂ.3,000/–

### 4. ವಸತಿ ಕಾರ್ಯಾಗಾರ

ವಸತಿ ರಹಿತ ನೇಕಾರರಿಗೆ ಈ ಯೋಜನೆಯಡಿ ವಸತಿ ಸೌಲಭ್ಯ ಒದಗಿಸಲಾಗುವುದು.

| ಕ್ರ. ಸ | ವಿವರ | ಘಟಕ ವೆಚ್ಚ(ರೂ.ಲಕ್ಷಗಳಲ್ಲಿ) | | |
|---|---|---|---|---|
| | | ಸಾಮಾನ್ಯ | ಪ.ಜಾ/ಪ.ಪಂ | |
| | | | ಗ್ರಾಮೀಣ | ನಗರ |
| 1 | ಕೈಮಗ್ಗ ಮತ್ತು ಜವಳಿ ಇಲಾಖೆಯ ಸಹಾಯಧನ | 1.00 | 1.00 | 1.00 |
| 2 | ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸಹಾಯಧನ | 1.20 | 1.75 | 2.00 |
| 3 | ಫಲಾನುಭವಿ ವಂತಿಕೆ | 0.30 | 0.25 | 0.25 |
| | ಒಟ್ಟು | 2.50 | 3.00 | 3.25 |

### 5. ವಿದ್ಯುತ್ ರಿಯಾಯಿತಿ ಸಹಾಯಧನ

01 ರಿಂದ 20 ಹೆಚ್.ಪಿ ವರೆಗಿನ ವಿದ್ಯುತ್ ಸಂಪರ್ಕ ಹೊಂದಿರುವ ಮಗ್ಗ ಹಾಗೂ ಮಗ್ಗಪೂರ್ವ ಘಟಕಗಳಿಗೆ ಪ್ರತಿ ಯೂನಿಟ್‌ಗೆ ರೂ.1.25 ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡುತ್ತಿದ್ದು, ಉಳಿಕೆ ಮೊಬಲಗನ್ನು ಸರ್ಕಾರವು ಭರಿಸುತ್ತಿದೆ.

### 6. ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ – **ವಿಶೇಷ ಘಟಕ / ಗಿರಿಜನ ಉಪ ಯೋಜನೆಯಡಿ ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ಮತ್ತು ಅತಿ ಸಣ್ಣ (ಎಸ್.ಎಂ.ಇ) ಘಟಕ ಸ್ಥಾಪನೆಗೆ ಸಹಾಯಧನ.**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವೈಯಕ್ತಿಕ ಫಲಾನುಭವಿ / ಪಾಲುದಾರಿಕೆ ಸಂಸ್ಥೆ / ಸಂಘ ಸಂಸ್ಥೆಗಳು / ಕಂಪನಿ ಶೇ.100 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರನ್ನು ಹೊಂದಿರತಕ್ಕದ್ದು. ಸಂಘ ಸಂಸ್ಥೆಗಳು ಜವಳಿ ಘಟಕಗಳನ್ನು ಸ್ಥಾಪಿಸಲು ಹಾಗೂ ವಿಸ್ತರಿಸಲು ಉದ್ದೇಶಿಸಿರುವ ಜವಳಿ ಸಹಕಾರ ಸಂಘ / ಎನ್.ಜಿ.ಓ / ಟ್ರಸ್ಟ್ / ಸಂಸ್ಥೆಗಳು ನೊಂದಾಯಿಸಿ 03 ವರ್ಷವಾಗಿರಬೇಕು. ಎಸ್.ಎಂ.ಇ ಘಟಕ ಯೋಜನಾ ವೆಚ್ಚದ ಮಿತಿ ಗರಿಷ್ಠ ರೂ.5.00 ಕೋಟಿವರೆಗೆ ಇದ್ದು, ಘಟಕದವರು ಉದ್ದೇಶಿತ ಯೋಜನಾ (ಸ್ಥಿರಾಸ್ತಿಗಳ) ಮೊತ್ತದ ಕನಿಷ್ಠ ಶೇ.50 ರಷ್ಟು ಸಾಲವನ್ನು ಬ್ಯಾಂಕ್ / ಹಣಕಾಸು ಸಂಸ್ಥೆಯಿಂದ ಪಡೆಯಬೇಕಾಗಿರುತ್ತದೆ. ಶೇ.75 ಬಂಡವಾಳ ಸಹಾಯಧನ ಹಾಗೂ ಶೇ.15 ಬಡ್ಡಿ ಸಹಾಯಧನ ನೀಡಲಾಗುವುದು. (ಸಹಾಯಧನವನ್ನು ಯೋಜನೆಯ ಪ್ರಗತಿಯನ್ನಾಧರಿಸಿ ಗರಿಷ್ಠ 04 ಕಂತುಗಳಲ್ಲಿ (Back end) ಪ್ರೋರೇಟಾ ಆಧಾರದ ಮೇಲೆ ಬಿಡುಗಡೆ ಮಾಡಲಾಗುವುದು).

### 7. ಅಕೋಸ್ಟಿಕ್ ಉಪಕರಣಗಳ ಖರೀದಿಗಾಗಿ ಸಹಾಯಧನ

ವಿದ್ಯುತ್ ಮಗ್ಗಗಳಿಂದ ಶಬ್ದ ಮಾಲಿನ್ಯ ಆಗುತ್ತಿರುವುದನ್ನು ನಿಯಂತ್ರಿಸಲು ವಿದ್ಯುತ್ ಮಗ್ಗಗಳ ಘಟಕಕ್ಕೆ ಅಕೋಸ್ಟಿಕ್ ಉಪಕರಣಗಳ ಅಳವಡಿಕೆಗಾಗಿ ರೂ.2.00 ಲಕ್ಷಗಳ ಘಟಕ ವೆಚ್ಚದಲ್ಲಿ ಶೇ.75 ರಷ್ಟು ಸಹಾಯಧನ ಒದಗಿಸಲಾಗುವುದು.

### 8. ನಿಧಿ ಯೋಜನೆ – ಸೀವಿಂಗ್ ಮೆಷಿನ್ ಖರೀದಿಗಾಗಿ ಸಹಾಯಧನ

ಸೀವಿಂಗ್ ಮೆಷಿನ್ ಆಪರೇಟರ್ ತರಬೇತಿ ಪಡೆದ ಮಹಿಳಾ ಅಭ್ಯರ್ಥಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ನಿಧಿ ಯೋಜನೆಯನ್ನು ಜಾರಿಗೆ ತಂದು ರೂ.30,000/– ಗಳ ಘಟಕ ವೆಚ್ಚದಲ್ಲಿ ಇಂಡಸ್ಟ್ರೀಯಲ್ ಸೀವಿಂಗ್ ಮೆಷಿನ್ ಖರೀದಿಗೆ ಶೇ.50ರಷ್ಟು ಸಹಾಯಧನ ನೀಡಲಾಗುವುದು.

### 9. 150 ಹೆಚ್.ಪಿ ವರೆಗಿನ ಹೆಚ್.ಟಿ. ವಿದ್ಯುತ್ ಸಂಪರ್ಕ ಹೊಂದಿರುವ ಘಟಕಗಳಿಗೆ ಶೇ.50 ರಷ್ಟು ವಿದ್ಯುತ್ ಸಹಾಯಧನ ಒದಗಿಸುವುದು

150 ಹೆಚ್.ಪಿ. ವರೆಗಿನ ವಿದ್ಯುತ್ ಸಂಪರ್ಕ ಪಡೆದ ರೇಪಿಯರ್ / ಲಾಳಿ ರಹಿತ ಏರ್‌ಜೆಟ್ ವಿದ್ಯುತ್‌ಮಗ್ಗಗಳ ಎಂ.ಎಸ್.ಎಂ.ಇ. ಘಟಕಗಳಿಗೆ ಶೇಕಡ 50 ರಷ್ಟು ವಿದ್ಯುತ್ ಸಹಾಯಧನವನ್ನು ಒದಗಿಸಲಾಗುವುದು.

## ಸಹಕಾರ ಸಂಘ / ಸಂಸ್ಥೆಗಳಿಗೆ ನೀಡುವ ಸೌಲಭ್ಯಗಳ ವಿವರ

### 1. ಮಿನಿ ಪವರ್‌ಲೂಮ್ ಪಾರ್ಕ್

ನೊಂದಾಯಿತ ಎಸ್.ಪಿ.ವಿ/ಸಂಘ ಸಂಸ್ಥೆಗಳಿಗೆ ಈ ಯೋಜನೆಯಡಿ ಪ್ರಯೋಜನ ಒದಗಿಸಲಾಗುವುದು.

- **ಘಟಕ ವೆಚ್ಚ ಮತ್ತು ಸರ್ಕಾರದ ಸಹಾಯಧನ :**
  - **ಸಾಮಾನ್ಯ ವರ್ಗ–ಕನಿಷ್ಠ 25 ನೊಂದಾಯಿತ ನೇಕಾರರು–**ಕನಿಷ್ಠ 5 ಎಕರೆ ಜಮೀನು ರೂ.100.00 ಲಕ್ಷ
  - **ಪ.ಜಾ/ ಪ.ಪಂಗಡ – ಕನಿಷ್ಠ 15 ನೊಂದಾಯಿತ ಪ.ಜಾ / ಪ.ಪಂ ನೇಕಾರರು –** ಕನಿಷ್ಠ 5 ಎಕರೆ ಜಮೀನು – ಗರಿಷ್ಠ ರೂ.300.00 ಲಕ್ಷ / ಯೋಜನಾ ವೆಚ್ಚದ ಶೇ.90 ರಷ್ಟು ಯಾವುದು ಕಡಿಮೆಯೋ ಅದು.

### 2. ಸೈಜಿಂಗ್ ಘಟಕ ಸ್ಥಾಪನೆ

ಸೈಜಿಂಗ್ ಅನುಭವ ಹೊಂದಿರುವ ನೇಕಾರರ ನೊಂದಾಯಿತ ಎಸ್.ಪಿ.ವಿ ಮೂಲಕ ವಿದ್ಯುತ್ ಮಗ್ಗ ಕ್ಲಸ್ಟರ್/ ವಿದ್ಯುತ್ ಮಗ್ಗ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಸೈಜಿಂಗ್ ಘಟಕ ಸ್ಥಾಪಿಸಲು ಘಟಕ ವೆಚ್ಚ ಮತ್ತು ಸರ್ಕಾರದ ಸಹಾಯಧನ ಸಾಮಾನ್ಯ ವರ್ಗ – ರೂ.300.00 ಲಕ್ಷ / ಯೋಜನಾ ವೆಚ್ಚದ ಶೇ.50 ರಷ್ಟು ಯಾವುದು ಕಡಿಮೆಯೋ ಅದು. ಸರ್ಕಾರದ ಸಹಾಯಧನ – ಪ.ಜಾ/ಪ.ಪಂಗಡ – ಗರಿಷ್ಠ ರೂ.500.00 ಲಕ್ಷ / ಯೋಜನಾ ವೆಚ್ಚದ ಶೇ.90 ರಷ್ಟು ಯಾವುದು ಕಡಿಮೆಯೋ ಅದು.

### 3. ಪ್ರೊಸೆಸ್ಸಿಂಗ್ ಘಟಕ ಸ್ಥಾಪನೆ

ಪ್ರೊಸೆಸ್ಸಿಂಗ್ ಅನುಭವ ಹೊಂದಿರುವ ನೊಂದಾಯಿತ ಎಸ್.ಪಿ.ವಿ ಮೂಲಕ ವಿದ್ಯುತ್ ಮಗ್ಗ ಕ್ಲಸ್ಟರ್/ ವಿದ್ಯುತ್ ಮಗ್ಗ ಸಾಂದ್ರತೆಯಿರುವ ಪ್ರದೇಶಗಳಲ್ಲಿ ಪ್ರೊಸೆಸ್ಸಿಂಗ್ ಘಟಕ ಸ್ಥಾಪಿಸಲು ಸರ್ಕಾರದ ಸಹಾಯಧನ – ಗರಿಷ್ಠ ರೂ.500.00 ಲಕ್ಷ / ಯೋಜನಾ ವೆಚ್ಚದ ಶೇ.50 ರಷ್ಟು ಯಾವುದು ಕಡಿಮೆಯೋ ಅದು.

### 4. ಉಣ್ಣೆ ವಲಯ ಅಭಿವೃದ್ಧಿ

ಉಣ್ಣೆ ವಲಯದ ಪುನಶ್ಚೇತನಕ್ಕಾಗಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಉಣ್ಣೆ ಕತ್ತರಿಸುವ ಯಂತ್ರ, ಉಣ್ಣೆ ಕತ್ತರಿಸುವ ಟೇಬಲ್ / ಪೀಠೋಪಕರಣ, ಉಣ್ಣೆ ಸಾಗಣಿಕೆ ವಾಹನ, ಕಾರ್ಡಿಂಗ್ ಮೆಷಿನ್ ಖರೀದಿಸಲು ಹಾಗೂ ಉಣ್ಣೆ ಸಂಗ್ರಹಣ ಉಗ್ರಾಣ, ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಿಸಲು ಸಹಕಾರ ಸಂಘಗಳಿಗೆ ಆರ್ಥಿಕ ಸಹಾಯ ಒದಗಿಸಲಾಗುವುದು.

### 5. ಸಾಮಾನ್ಯ ಸೌಲಭ್ಯ ಕೇಂದ್ರ

ನೇಕಾರ ಸಹಕಾರ ಸಂಘಗಳಿಗೆ ಸಾಮಾನ್ಯ ಸೌಲಭ್ಯ ಕೇಂದ್ರ ನಿರ್ಮಿಸಲು ಸಹಾಯಧನ ಒದಗಿಸಲಾಗುವುದು. ಘಟಕ ವೆಚ್ಚ ರೂ. 10.00/ 15.00 ಲಕ್ಷ.

- **ಸರ್ಕಾರದ ಸಹಾಯಧನ – ಸಾಮಾನ್ಯ ವರ್ಗ–** ರೂ. 10.00 ಲಕ್ಷ
  **– ಪ.ಜಾ / ಪ.ಪಂಗಡ –** ರೂ. 15.00 ಲಕ್ಷ

### 6. ಮಗ್ಗ ಪೂರ್ವ ಸೌಲಭ್ಯ

ಪ.ಜಾ/ಪ.ಪಂ ನೇಕಾರ ಸಹಕಾರ ಸಂಘಗಳಿಗೆ ಮಗ್ಗ ಪೂರ್ವ ಸೌಲಭ್ಯಗಳಿಗೆ ಸಹಾಯಧನ ಒದಗಿಸಲಾಗುವುದು.

- ಘಟಕ ವೆಚ್ಚ ರೂ.6.00 ಲಕ್ಷ
- ಸರ್ಕಾರದ ಸಹಾಯಧನ – ರೂ.6.00 ಲಕ್ಷ

### 7. ನೇಕಾರರ ಕಾಲೋನಿಗಳಿಗೆ ಮೂಲಭೂತ ಸೌಲಭ್ಯ ಅಭಿವೃದ್ಧಿ ಯೋಜನೆ

ನೇಕಾರರು ವಾಸಿಸುವ ಪ್ರದೇಶದಲ್ಲಿ ಹಾಗೂ ಹೆಚ್ಚು ಜನ ಸಾಂದ್ರತೆಯನ್ನು ಹೊಂದಿರುವ ವ್ಯಾಪ್ತಿಯಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳ ಕೊರತೆಯನ್ನು ನೀಗಿಸಲು ಕನಿಷ್ಠ ಒಂದು ಎಕರೆ ಪ್ರದೇಶದಲ್ಲಿ ಅಸಂಘಟಿತ ವಲಯದ ಅಥವಾ ಸಂಘಟಿತ ವಲಯದ ನೇಕಾರರಿಗೆ ಅನುಕೂಲವಾಗುವಂತೆ ರಸ್ತೆ ಅಭಿವೃದ್ಧಿಪಡಿಸುವುದು, ಒಳಚರಂಡಿ ನಿರ್ಮಾಣ,